ಕೋಲಾರ ಡಿಸ್ಟ್ರಿಕ್ಟು.

ತಾರೀಖು 24ನೇ ಜೂನ್ 1887.

ಕೋಲಾರ ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ಈ ಕೆಳಗೆ ವಿವರಿಸೋಣಾದ ರಿಜಿಸ್ಟ್ರಾದ ಮತ್ತು ರಿಜಿಸ್ಟ್ರೇಷ್ ತಿರಸ್ಕರಿಸಲ್ಪಟ್ಟ 3 ತಂ ಸೂಕುಗಳು 2 ವರುಷಗಳಿಗೆ ಮೇಲ್ಪಟ್ಟ ಕಾಲದಿಂದ ಹಾಜರ್ಮಾಡಿದವರು ವಾಪಸ್ ಕೇಳದೆ ಇರುವ ಕಾರಣ ನಿಂತಿರುತ್ತವೆ. ಸದರಿ ತಂಸೂಕುಗಳನ್ನು ಹಾಜರ್ಮಾಡಿದವರು ಅಥವಾ ವಾಪಸು ಪಡಿಯಲು ಅಧಿಕಾರ ಹೊಂದಿದವರು ಯಾ ತಂಸೂಕುಗಳಲ್ಲಿ ಬಾಧ್ಯತೆವುಳ್ಳವರು ಯಾರಾಗಲಿ ಭದ್ರಪಡಿಸಿದ ಬಗ್ಗೆ ರೂಲ್ಸು ಪ್ರಕಾರ ವಿಧಾಯಕವಾಗಿರುವ ಫೀಜು ಪಾವತಿಯಿಂದ ತಂಸೂಕುಗಳನ್ನು ಈ ತಾರೀಖು ಲಾಗಾಯತು 1 ತಿಂಗಳಲ್ಲಿ ಮೇಲ್ಕಂಡ ಸಬ್ ರಿಜಿಸ್ಟ್ರಾ ಆಫೀಸಿನಲ್ಲಿ ಹಾಜರಾಗಿ ವಾಪಸ್ ಪಡಿಯಬಹುದು, ತಪ್ಪಿದರೆ ಅವುಗಳು ರಿಜಿಸ್ಟ್ರೇಷ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವವು.

ರಿಜಿಸ್ಟ್ರಬುಕ್ಕಿನ ಇಸವಿ ಮತ್ತು ನಂಬರು.	ಕಕ್ಷಿಗಾರರ ಹೆಸರು.		ತಂಸೂಕಿನ ತಾರೀಖು.	ರಿಜಿಸ್ಟ್ರೇಷ್ ಬೈಪಾಡಿ ರ್ಯಾಜ್ಞಾಪ್ತಿ ತಾರೀಖು.	ರಿಜಿಸ್ಟ್ರಾದ ಅಥವಾ ರಿಜಿಸ್ಟ್ರೇಷ್ ತಿರಸ್ಕರಿಸಲ್ಪಟ್ಟ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಿಮ್ಮತ್ತು.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರು.				
1884—85ನೇ ಇಸವಿ ಬಗೆ 2ನೇ ನಂಬರು ರಿಜಿಸ್ಟ್ರೇಷ್ ಬುಕ್ಕು ಬಾಬತು	ಬೆಂಗಳೂರು ಮಾಮೂಲ್ ಪೇಟೆಯಲ್ಲಿರುವ ರಾಯಬಹದೂರ್ ಯಲೆ ಮಲ್ಲಪ್ಪಶೆಟ್ಟಿ ಕೊಮಾರ್ರು ಯಲೆವೀರಂಣ ಶೆಟ್ಟರು	ಕೋಲಾರ ತಾಲ್ಲೂಕು ಹುತ್ತೂರು ಹೋಬಳಿ ನಂದಬಳ್ಳಿ ಗ್ರಾಮದಲ್ಲಿ ಯಿರುವ ದೇಕಕುಲಕರಣಿ—1ನೇ ಲಕ್ಷ್ಮಿನಾರಣಪ್ಪ 2ನೇ ವೆಂಮಂಣ	1884ನೇ ಇಸವಿ ಜೂಲೈ ತಾರೀಖು 17	1884ನೇ ಇಸವಿ ನವೆಂಬರು ತಾರೀಖು 18	ರಿಜಿಸ್ಟ್ರೇಷ್ ತಿರಸ್ಕರಿಸಲ್ಪಟ್ಟದ್ದು 1885ನೇ ಇಸವಿ ಮಾರ್ಚಿ 18	ನಂದಂಬಳ್ಳಿ ಗ್ರಾಮದ ಬಳೆಯ 1 ಖಂಡಿ ತರಿ, ಕೆರೆಸಂದ್ರದ ಜಮೀನಿನಲ್ಲಿ 1 ಖಂಡಗದ 6 ಆರು ಬಳ್ಳ ಜಮೀನು ಸಾಲು 1ಕ್ಕೆ 16-1-0 ಮೇೀಗೆ ಕಾಯಂ ಕಂದಾಯಕ್ಕೆ ಕೊಟ್ಟರುವದಾಗಿ
ಡಿಟೋ 1885—86ನೇ ಇಸವಿ ಬಗೆ	ಮುಳಬಾಗಲ್ ತಾಲ್ಲೂಕು ಪಂಬರಪಲ್ಲಿಯಲ್ಲಿರುವ 1ನೇ ಶಾಪೂರು ಕಿಚ್ಚಯ್ಯ 2ನೇ ಇವನ ತಮ್ಮ ಮುನಿಶಾಮಯ್ಯ	ಕೋಲಾರದ ತಾಲ್ಲೂಕು ಹೋಳೂರು ಹೋಬಳಿ ಮಣಿಗಟ್ಟದಲ್ಲಿರುವ ಯಂಗಟರಡ್ಡಿ	1884ನೇ ಇಸವಿ ಜೂಲೈ ತಾರೀಖು 15 ಬರು	1885ನೇ ಇಸವಿ ಜನವರಿ 10	ರಿಜಿಸ್ಟ್ರೇಷ್ ತಿರಸ್ಕರಿಸಲ್ಪಟ್ಟದ್ದು 1885ನೇ ಇಸವಿ ಆಗಸ್ಟ್ 13	ಮಣಿಗಟ್ಟ ಗ್ರಾಮಕ್ಕೆ ಶೇರಿದ ಕಾಯಂಗುತ್ತಾ ಕೃಷ್ಣರಾಜಪುರದ ಜೀಚಿರಾಖ ಗ್ರಾಮದಲ್ಲಿ, ಬರಿಕೊಟ್ಟವರ 8ರಲ್ಲಿ ವಂದು ಭಾಗ 55 ರೂಪಾಯಿಗಳಿಗೆ ಕ್ರಯಮಾಡಿ ಯಿರುವದಾಗಿ
1ನೇ ನಂಬರು ಬುಕ್ಕಿನ 1885—86ನೇ ಇಸವಿ ನಂಬರು 171	ಕೋಲಾರ ತಾಲ್ಲೂಕು ಹೋಳೂರು ಹೋಬಳಿ ಮಣಿಗಟ್ಟು ಗ್ರಾಮದಲ್ಲಿ ಯಿರುವ ವೀನಪ್ಪನ ಮಗ ಕೃಷ್ಣಪ್ಪ	ಡಿಟೋ ಗ್ರಾಮದಲ್ಲಿ ಯಿರುವ ಕೊಂಡಾರಡ್ಡಿ	ಡಿಟೋ 1885ನೇ ಇಸವಿ ಜೂನ್ ತಾರೀಖು 8	ಡಿಟೋ 1885ನೇ ಇಸವಿ ಜೂನ್ ತಾರೀಖು 8	ರಿಜಿಸ್ಟ್ರಾದ್ದು 1885ನೇ ಇಸವಿ ಜನವರೀ 8	ಮಣಿಗಟ್ಟ ಗ್ರಾಮದಲ್ಲಿ ಬರಕೆ ಕೊಟ್ಟವನಿಗೆ ಯಿರುವ 9ನೇ ನಂಬರು ಖುಷ್ಕಿ ೦।೦।।ಗೆ ಕಂದಾಯ 6—6—0 ವುಳ್ಳ ಜಮೀನು 20 ರೂಪಾಯಿಗಳಿಗೆ ಕ್ರಯಮಾಡಿ ಯಿರುವದಾಗಿ

ಕೃಷ್ಣಯ್ಯಂಗಾರ್,
ಸಾರ್ ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 8ನೇ ಜೂನ್ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಗುಬ್ಬಿ ಸಬ್ ರಿಜಿಸ್ಟ್ರಾ ಆಫೀಸಿನಲ್ಲಿ ಪೇವಾರಸ್‌ಆಗಿ ಇರತಕ್ಕ ಈ ಕೆಳಗೆ ವಿವರಿಸೋಣವಾಗಿಯಿರುವ ದಸ್ತೈವಜನ್ನ ಹಾಜರ್ಮಾಡಿವವರೆ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೆ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಗುಬ್ಬಿ ಸಬ್ ರಿಜಿಸ್ಟ್ರಾರರಲ್ಲಿ ಹಾಜರಾಗಿ ಸದರಿ ದಸ್ತೈವಜನ್ನ ವಾಪಸುಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯ್ಯ ರಿಜಿಸ್ಟ್ರೇಷ್ಆ್ಟನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು.